ದಿನಾಂಕಃ **21.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **1** ನೇ ಎದುರುದಾರರ ಪರ ಶ್ರೀ ಡಿಜಿ ಪಿ ವಕೀಲರಿಂದಃ-

ಭೂ ಪರಿಹಾರದ ಹಣ ಕಡಿಮೆ ಇದೆ ಎಂದು ಎಸ್ ಎಲ್ ಎ ಓ ಕಚೇರಿಗೆ ನೀಡಿದ ಮನವಿ ಯಾವ ದಿನಾಂಕ ಎಂದು ನನಗೆ ನೆನಪಿಲ್ಲ. ಭೂ ಸ್ವಾಧೀನವಾಗಿರುವ ವಿಸ್ತೀರ್ಣ **34** ಗುಂಟೆ ಅಂದರೆ ಸರಿ . ಭೂ ಸ್ವಾಧೀನಕ್ಕೆ ಒಳಗಾದ ಜಮೀನಿನಲ್ಲಿ ಮಳೆ ಬಂದರೆ ಮಾತ್ರ ಬೆಳೆ ಅಂದರೆ ಸರಿ. ಭೂಸ್ವಾಧೀನವಾದ ಜಮೀನಿನಲ್ಲಿ ಬೋರ್ ವೆಲ್ ಇರಲಿಲ್ಲ, ಪಕ್ಕದ ಜಮೀನಿರವರ ಬೋರ್ ವೆಲ್ ಸಹಾಯದಿಂದ

ನೀರನ್ನು ಪಡೆಯುತ್ತಿದ್ದೇವು. ಯಾವುದೇ ಮರವಳಿಗಳು ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನಿನಲ್ಲಿ **5** ಹುಣಸೇ ಮರ, **180** ನೀಲಗಿರಿ ಮರ , **2** ಬಿಲ್ವರ , **6** ಬೇವಿನ ಅದರ ಜೊತೆಗೆ ಬಿದರ ಮಳೆ , ಕಾಡು ಮರಗಳು ಇದ್ದವು . ನನ್ನಪ್ರಮಾಣ ಪತ್ರದಲ್ಲಿ ನಿಖರವಾಗಿ ಎಷ್ಟು ಮರ ಹೋಗಿದೆ ಎಂದು ಹೇಳಿಲ್ಲ ಅಂದರೆ ಸರಿಯಲ್ಲ . ಪ್ರಮಾಣ ಪತ್ರದಲ್ಲಿ ಮರವಳಿಗಳಿಗೆ ಇಂತಿಷ್ಟು ಬೆಲೆ ಇತ್ತು ಎಂದು ಈ ಪ್ರಕರಣದ ಸಲುವಾಗಿ ಸೃಷ್ಟಿ ಮಾಡಲಾಗಿದೆ ಅಂದರೆ ಸರಿಯಲ್ಲ. ಮರಗಳ ವಯಸ್ಸನ್ನು ತೋರಿಸಲು ನ್ಯಾಯಲಾಯದ ಮುಂದೆ ಯಾವುದೇ ದಾಖಲಾತಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ . ಭೂ ಸ್ವಾಧೀನವಾಗಿರುವ ಜಮೀನನ್ನು ಹೊರತುಪಡಿಸಿ ಉಳಿಕೆ ಜಮೀನಿನಲ್ಲಿ ವ್ಯವಸಾಯ ಮಾಡಲು ಆಗುತ್ತಿಲ್ಲ. ಸ್ವಾಧೀನಪಡಿಸಿಕೊಂಡ ಜಮೀನಿಗೆ ಇಲಾಖೆಯವರು ಸೂಕ್ತವಾದ ಪರಿಹಾರವನ್ನು ನೀಡಿರುತ್ತಾರೆ, ಹೆಚ್ಚಿನ ಪರಿಹಾರ ಪಡೆಯಲು ತಾವು ಅರ್ಹರಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ನಿಪಿ-**18, 19** ರ ಕ್ರಯಪತ್ರವು ಭೂ ಸ್ವಾಧೀನವಾಗಿರುವ ಜಮೀನಿಗೆ ಸಂಬಂದಪಟ್ಟದ್ದು ಅಲ್ಲ ಅಂದರೆ ಸರಿಯಲ್ಲ. ನಿಪಿ-**20, 21** ರ ತೀರ್ಪುಗಳು ತಮ್ಮ ಭೂ

ಸ್ವಾಧೀನವಾಗಿರುವ ಜಮೀನಿಗೆ ಸಂಬಂಪಟ್ಟದ್ದು ಅಲ್ಲ ಅಂದರೆ ಸರಿಯಲ್ಲ **.**

**-** ಮರುವಿಚಾರಣೆ ಇಲ್ಲ**-**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು